

■ ಪ್ರಕಾಶ ಗ. ಖಾಡೆ
ಕಲೆ: ಎಸ್‌ವಿ. ಹೂಗಾರ

# ಬಾಳುಕುನ ಪುರಾಣ

ಊರ ಅಗಸಿ ಬಾಗಿಲಾ ದಾಟಿ ಮುಂದ ಹ್ವಾದರ ಸಿನಗಾರ ಗಂಗಪ್ಪನ ಸೆರೆದಂಗಡಿ ಸಿಗತೈತಿ, ಅಲ್ಲಿ ನಿತ್ಯ ಬಂದು ಹೋಗುವ ತ್ವಾಟದ ಸಾವ್ಕಾರ ಬಾಳುಕು ಇವತ್ತ ಬಂದು, ಎಂದಿನಂತೆ, ತನ್ನ ಗ್ಲಾಸಿನಲ್ಲಿ ಸೆರೆ ಸುರುವಿಕೊಂಡು ಕೆಟ್ಟ ಮುಖಾ ಮಾಡಿ ಒಂದೆರಡು ಪೆಗ್ಗ ಕುಡದ ಕುಂತಿದ್ದಾ, ಅದೇ ಹೊತ್ತಿಗೆ ಪಂಚಾಯ್ತಿ ಸೈದುಸಾಬ ಬಂದು 'ಸಾವ್ಕಾರ, ನಿಮ್ಮ ಕಡೆನ ಬಂದಿದ್ದೇ, ಪಂಚಾಯ್ತಿ ಸೆಕ್ರಟರಿ ಸಾಹೇಬರು ನಿಮ್ಮನ್ನ ಕರಕೊಂಡ ಬರಾಕ ಹೇಳ್ಯಾರ, ತ್ವಾಟಕ್ಕ ಹೋಗು ಮೊದಲ ಪಂಚಾಯ್ತಿಗಿ ಬಂದ ಹೋಗ್ರೀ' ಅಂತಾ ಬುಲಾವ್ ಕೊಟ್ಟ ಹ್ವಾದಾ. ಸೆಕ್ರೆಟರಿ ಸಾಹೇಬ ಯಾಕ ಕರೀತಾನಪಾ ಅಂತಾ ಕುಡಿಯೋದು ಅರ್ಧಕ್ಕೆ ನಿಲ್ಲಿಸಿ ಊರ ದಾರಿ ಹಿಡಿದಾ.

ಹೀಂಗ ದಾರಿ ಹಿಡಿದ ಹೋಗುವಾಗ ಚಂದ್ರ ಸಾಲ್ಯಾಗ ಇಳಿದಿದ್ದ ಬಹಿರೂಪಗಾರ ಮಂದಿ ಕಣ್ಣಿಗೆ ಬಿದ್ದರು. ಊರಾನ ಚಂದ್ರ ಸಾಲಿ ಅಂದ್ರ ಪರ ಊರ ಮಂದೀಗಿ ಲಾಜಿಂಗ್ ಇದ್ದಾಂಗ. ದುರಗಮುರಗಿಯವರು, ಬಹಿರೂಪಗಾರರು, ಕರಡಿ ಆಡಸಾವ್ರು, ಪಿನ್ನು ಹೇರಪಿನ್ನು ಪುಗ್ಗಾ ಮಾರುವವರು, ಕೊರವಂಜಿಯವರು ಯಾರೇ ಊರಿಗಿ ಬರಲಿ, ಮೊದಲ ಚಂದ್ರ ಸಾಲ್ಯಾಗ ಇಳಿದು, ಅಲ್ಲಷ್ಟ ವಿಶ್ರಮಿಸಿಕೊಂಡು, ಇಲ್ಲಾ ವೇಷ ಬದಲಿಸುವುದಿದ್ರ ಬದಲಿಸಿ, ಅಲ್ಲೇ ತಮ್ಮ ಸಾಮಾನ ಇಟ್ಟು ಊರ ತಿರಗಾಕ ಹೋಗತಿದ್ದರು.

ಇವತ್ತ ಈ ಊರಿಗಿ ಆಗಮಿಸಿದ್ದ ಬಹಿರೂಪಗಾರರು ಇಲ್ಲಿ ತಮ್ಮ ವೇಷಾ ಸಿದ್ಧಪಡಿಸಿಕೊಳ್ಳತಿದ್ರು, ರಾಮ, ಲಕ್ಷ್ಮಣ, ಹನಮಂತ ಮತ್ತ ಸೀತಾ ಮೇಕಪ್ ಮಾಡಕೊತ ನಿಂತಿದ್ರು. ಕಣ್ಣು ಮೂಗಿನಿಂದ ಚೆಲುವೆಯಾದ ಸೀತಾಳ ಮ್ಯಾಲ ನಮ್ಮ ಬಾಳುಕುನ ಕಣ್ಣ ಬಿತ್ತು, ಸೀತಾಳೂ ಸೆರಿಗಿನಲ್ಲಿ ಮುಗಳ್ನಕ್ಕು ಮೋಡಿ ಮಾಡಿದಳು. ಅರೆ ನಿಶೆಯಲ್ಲಿದ್ದ ಬಾಳುಕುಗ ಸ್ವರ್ಗಕ್ಕೇ ಮೂರೇ ಗೇಣು ಅನಿಸಿತು. ಕಾಳ ಹಾಕಾಕ ಬಾಳುಕು ಮುಂದ ಇದ್ದ, ಮಾತಿನ್ಯಾಗ ಹೊಟ್ಟ್ಯಾನ ಹಳ್ಳ ಕರಗುವ್ಹಂಗ ಮಾತಾಡತಿದ್ದ. ಬಾಳುಕು ಸಣ್ಣಂಗ ಬಹಿರೂಪಗಾರರನ್ನ